ಶ್ರೀ ಎ. ಲಕ್ಷ್ಮೀಸಾಗರ್(ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು).—

ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ತಾಲ್ಲೂಕು ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳು ಮತ್ತು ಉಪ-ವಿಭಾಗೀಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯಗಳಲ್ಲಿ ದಂಡ ಪ್ರಕ್ರಿಯಾ ಸಂಹಿತೆಯ ೫೦೭ನೇ ಪ್ರಕರಣದ ಅಡಿಯಲ್ಲಿ ೧೯೨ ಮೊಕದ್ದಮೆಗಳು, ದಂಡ ಪ್ರಕ್ರಿಯಾ ಸಂಹಿತೆಯ ೧೧೦ನೇ ಪ್ರಕರಣದ ಅಡಿಯಲ್ಲಿ ೩೪ ಮೊಕದ್ದಮೆಗಳು ಮತ್ತು ದಂಡ ಪ್ರಕ್ರಿಯಾ ಸಂಹಿತೆಯ ೧೪೫ನೇ ಪ್ರಕರಣದ ಅಡಿಯಲ್ಲಿ ೧೪ ಮೊಕದ್ದಮೆಗಳನ್ನು ಹೂಡಲಾಗಿದೆ.

ಆ) ಕಳೆದ ಎರಡು ವರ್ಷಗಳಲ್ಲಿ ಹೊನ್ನಾವರದ ತಾಲ್ಲೂಕು ಮ್ಯಾಜಿಸ್ಟ್ರೇಟ್ ನ್ಯಾಯಾಲಯದಲ್ಲಿ ಪೋಲೀಸರು ದಂಡ ಪ್ರಕ್ರಿಯಾ ಸಂಹಿತೆಯ ೧೦೭ನೇ ಪ್ರಕರಣದ ಅಡಿಯಲ್ಲಿ ೧೫೭ ಮೊಕದ್ದಮೆಗಳನ್ನು ಹೂಡಿದ್ದಾರೆ. ಅವುಗಳ ಪೈಕಿ ೪೦ ಮೊಕದ್ದಮೆಗಳಲ್ಲಿ ಇತ್ಯರ್ಥವಾಗದೇ ಉಳಿದಿವೆ.

## ಆಡಳಿತ ಸುಧಾರಣೆಯ ದೃಷ್ಟಿಯಿಂದ ಅಧಿಕಾರಿಗಳನ್ನು ತೆಗೆದು ಹಾಕಿರುವುದರ ಬಗ್ಗೆ.

೫೯೮. ಶ್ರೀ ಆರ್. ಎನ್. ನಾಯ್ಕ್ (ಭಟ್ಕಳ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಅಧಿಕಾರಿಗಳ ಆಡಳಿತ ಸುಧಾರಣೆಯ ದೃಷ್ಟಿಯಿಂದ, ಕೆಲಸದಿಂದ ತೆಗೆಯಲಾಗಿರುವ ಸಂಖ್ಯೆ ಎಷ್ಟು ?

ಆ) ಕೆಲಸದಿಂದ ತೆಗೆದುಹಾಕಬೇಕಾದಲ್ಲಿ ಅನುಸರಿಸಬೇಕಾಗಿರುವ ನಿಯಮಗಳೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಯವರು).—

ಅ) ಜೂನ್ ೧೯೮೫ ರಿಂದ ಜುಲೈ ೧೯೮೭ರ ಕೊನೆಯವರೆಗೆ ೧೧೧ ಜನ ಸರ್ಕಾರಿ ನೌಕರರನ್ನು ಆಡಳಿತ ಸುಧಾರಣೆಯ ದೃಷ್ಟಿಯಿಂದ ಕಡ್ಡಾಯ ನಿವೃತ್ತಿಗೊಳಿಸಲಾಗಿದೆ.

ಆ) ಸರ್ಕಾರಿ ಸೇವೆಯಲ್ಲಿ ೨೫ ವರ್ಷ ಸೇವೆ ಸಲ್ಲಿಸಿದ ಅಥವಾ ೫೦-೫೫ ವರ್ಷ ವಯಸ್ಸು ತುಂಬಿರುವ ಅಸಮರ್ಥರಾದ ಸರ್ಕಾರಿ ನೌಕರರನ್ನು ಕಡ್ಡಾಯವಾಗಿ ನಿವೃತ್ತಿಗೊಳಿಸಲು ಇಲಾಖಾ ಪರಿಶೀಲನಾ ಸಮಿತಿಗಳನ್ನು ರಚಿಸಿಕೊಳ್ಳಬೇಕಾಗುತ್ತದೆ. ಈ ಇಲಾಖಾ ಪರಿಶೀಲನಾ ಸಮಿತಿಯು ಸಂಬಂಧಪಟ್ಟ ಸರ್ಕಾರಿ ನೌಕರನ ರಹಸ್ಯ ವರದಿಗಳಲ್ಲಿ ಆ ನೌಕರನ ಸೇವಾ ವಿವರಗಳನ್ನು ಪರಿಶೀಲಿಸುವುದರ ಜತೆಗೆ ಆ ನೌಕರನ ಸಾಮಾನ್ಯ ಸೇವಾ ತತ್ಪರತೆ ಮತ್ತು ಸಮರ್ಥತೆ ಮುಂತಾದ ವಿಷಯಂಗಳದ್ದೂ ಸಹ ಪರಿಗಣನೆಗೆ ತೆಗೆದುಕೊಳ್ಳಬೇಕು ಹಾಗೂ ಆ ನೌಕರನ ಸೇವೆಗೆ ಸಂಬಂಧಪಟ್ಟಂತೆ ಲಭ್ಯವಿರುವ ಎಲ್ಲಾ ರಹಸ್ಯ ವರದಿಗಳಲ್ಲಿ ಒಟ್ಟಾರೆ ಅವನ ಸೇವಾ ವಿವರಗಳನ್ನು ಪರಿಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ.

## ಪೋಲೀಸೇತರ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ.

೫೯೯. ಶ್ರೀ ಪಟಮಕ್ಕಿ ರತ್ನಾಕರ್(ಶೀರ್ಥಹಳ್ಳಿ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಪೋಲೀಸ್ ಇಲಾಖೆಯನ್ನು ಹೊರತು ಪಡಿಸಿ ಬೇರೆ ಇಲಾಖೆಗಳಲ್ಲಿ ಕೆಲಸ ಮಾಡುತ್ತಿರುವ ಐಪಿಎಸ್ ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಅವರ ಹೆಸರು ಹಾಗೂ ಈಗಿರುವ ಹುದ್ದೆಯ ವಿವರಗಳೇನು ?

ಶ್ರೀ ರಾಮಕೃಷ್ಣ ಹೆಗಡೆ(ಮುಖ್ಯ ಮಂತ್ರಿಗಳು).—

ಅ) ೧೫.

ಆ) ಅವರ ಹೆಸರು ಮತ್ತು ಹುದ್ದೆಯ ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.